1/

ದೂರವಾಣಿ ಸಂಖ್ಯೆ: 08182-246188
ಫ್ಯಾಕ್ಸ್ ಸಂಖ್ಯೆ : 08182-246192
E-mail-cmdt8bn@ksp.gov.in

ಕರ್ನಾಟಕರಾಜ್ಯ ಪೊಲೀಸ್

ಕಮಾಂಡೆಂಟ್‌ರವರಕಛೇರಿ
8ನೇ ಪಡೆ, ಕೆ.ಎಸ್.ಆರ್.ಪಿ.,
ಶಿವಮೊಗ್ಗ 577 222

ಸಂಖ್ಯೆ: 46/ಸಿಬ್ಬಂದಿ-1/2021-22

ದಿನಾಂಕ: 14.07.2022

# ನೇಮಕಾತಿ ಆದೇಶ

ವಿಷಯ:- 8ನೇ ಪಡೆ, ಕೆ.ಎಸ್.ಆರ್.ಪಿ. ಶಿವಮೊಗ್ಗ ಘಟಕದಲ್ಲಿ ಖಾಲಿಯಿರುವ 18 ಸ್ಪೆಷಲ್ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ ಬ್ಯಾಂಡ್ಸ್‌ಮನ್ (ಪುರುಷ) ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ:-
1. ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು)(ತಿದ್ದುಪಡಿ)ನಿಯಮಗಳು 2020.
2. ನೇಮಕಾತಿ ಅಧಿಸೂಚನೆ ಸಂಖ್ಯೆ: 15/ನೇಮಕಾತಿ-4/2019-20 ದಿ:28.03.2020.
3. ಡಿ.ಐ.ಜಿ.ಪಿ, ನೇಮಕಾತಿ, ಬೆಂಗಳೂರು ರವರ ಮೆರಿಟ್&ಆಯ್ಕೆಪಟ್ಟಿ ದಿ:03.08.2021
4. ಈ ಕಛೇರಿ ತಾತ್ಕಾಲಿಕ ಆಯ್ಕೆಪಟ್ಟಿ ಸಮ ಸಂಖ್ಯೆ ದಿನಾಂಕ:09.08.2021 & 08.03.2022
5. ಮಾನ್ಯಎಡಿಜಿಪಿ ಕೆ.ಎಸ್.ಆರ್.ಪಿ. ಬೆಂಗಳೂರು. ರವರ ಜ್ಞಾಪನ ಸಂಖ್ಯೆ-11/ಸಿ-6/ಆರ್.ಪಿ.ಸಿ/ನೇ/2019-20 ದಿನಾಂಕ: 09-04-2021 ಹಾಗೂ 29.07.2021

* * * *

ಕೆ.ಎಸ್.ಆರ್.ಪಿ/ಐ.ಆರ್.ಬಿ ಘಟಕಗಳಲ್ಲಿ ಖಾಲಿ ಇರುವ ವಿಶೇಷ ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್ ಬ್ಯಾಂಡ್ಸ್‌ಮನ್(ಪುರುಷ) ಹುದ್ದೆಗಳನ್ನು ಭರ್ತಿ ಮಾಡಲು ಉಲ್ಲೇಖ- (2)ರ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಉಲ್ಲೇಖ(2)ರಅಧಿಸೂಚನೆಯಲ್ಲಿ ನೀಡಲಾಗಿರುವ ನಿಯಮ ಮತ್ತು ಷರತ್ತುಗಳು ~~ಸರ್ಕಾರದಅಧಿಸೂಚನೆ ಸಂಖ್ಯೆ ಹೆಚ್.ಡಿ 188 ಪೊಸಿಪಿ 2018 ದಿನಾಂಕ: 06.05.2020~~ ರ ಕೆ.ಎಸ್.ಆರ್.ಪಿ (ನೇಮಕಾತಿ ಮತ್ತು ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳು-2020ರ ಅಧಿಸೂಚನೆಯಾನುಸಾರವಾಗಿರುತ್ತದೆ.

ಮೇಲೆ ತಿಳಿಸಲಾದ ಅಧಿಸೂಚನೆಯನ್ವಯ ನೇಮಕಾತಿ ಪ್ರಾಧಿಕಾರವು ದಿನಾಂಕ: 29.11.2020ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಸದರಿ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ನಂತರ ನಿಯಮಾನುಸಾರ ನೇಮಕಾತಿಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಡಿ.ಐ.ಜಿ.ಪಿ., ನೇಮಕಾತಿ, ಬೆಂಗಳೂರು ರವರುಉಲ್ಲೇಖಿತ-(3)ರ ಪ್ರಕಾರ ತಾತ್ಕಾಲಿಕಆಯ್ಕೆ ಪಟ್ಟಿಯನ್ನು ಕಳುಹಿಸಿದ್ದು ಕೆ.ಎಸ್.ಆರ್.ಪಿ. 8ನೇ ಪಡೆ, ಶಿವಮೊಗ್ಗಘಟಕಕ್ಕೆ 18 ಅಭ್ಯರ್ಥಿಗಳ ರೋಸ್ಟರ್‌ವಾರು ಪಟ್ಟಿಯನ್ನು ಹಂಚಿಕೆ ಮಾಡಿರುತ್ತಾರೆ. ಉಲ್ಲೇಖಿತ(4)ರಲ್ಲಿ ಈ ಕಛೇರಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು ಸದರಿ ಅಭ್ಯರ್ಥಿಗಳ ಸಂಬಂಧಪಟ್ಟ ದಾಖಲಾತಿಗಳ ಪರಿಶೀಲನೆ ಹಾಗೂ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾಗಿದೆ.

ಪ್ರಸ್ತುತ ಪ್ರಕಟಿಸಿರುವ 3ನೇ ಭಾಗಶಃ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಅಭ್ಯರ್ಥಿಗಳ ಆಯ್ಕೆ ಮೀಸಲಾತಿಯು ತಾತ್ಕಾಲಿಕವಾಗಿದ್ದು ಗೈರುಹಾಜರಿ ಹಾಗೂ ಆಯ್ಕೆಯನ್ನು ರದ್ದುಪಡಿಸಲು ಕೋರಿರುವ ಅಭ್ಯರ್ಥಿಗಳ ಸ್ಥಾನಕ್ಕೆ ಹೆಚ್ಚುವರಿ ಶೇ 25 ರಷ್ಟು ಅಭ್ಯರ್ಥಿಗಳಿಗೆ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಸ್ಥಾನ ನೀಡಬೇಕಾಗಿದ್ದು ಎಲ್ಲಾ ಅಭ್ಯರ್ಥಿಗಳನ್ನು ಒಳಗೊಂಡು ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವವರೆಗೂ ಆಯ್ಕೆ ಮೀಸಲಾತಿ ಬದಲಾವಣೆಗೆ ಒಳಪಟ್ಟಿರುತ್ತದೆ. ಅಂತಿಮಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗುವ ಅಭ್ಯರ್ಥಿಗಳ ಆಯ್ಕೆ ಮೀಸಲಾತಿ ಅಂತಿಮವಾಗಿರುತ್ತದೆ.

ಅದರಂತೆ 18 ಅಭ್ಯರ್ಥಿಗಳ ಪೈಕಿ ಈ ಕೆಳಕಂಡ 01 ಅಭ್ಯರ್ಥಿಯ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಆಯ್ಕೆ ಮೀಸಲಾತಿಯಂತೆ ದಾಖಲಾತಿ ಪರಿಶೀಲನೆ ಹಾಗೂ ಪೊಲೀಸ್ ಪೂರ್ವಚರಿತ್ರಾ ವರದಿಗಳು ಬಂದಿದ್ದು, ಸದರಿಯವರುಗಳ ವಿರುದ್ಧ ಯಾವುದೆ ಪ್ರತಿಕೂಲ ವರದಿಗಳು ಇಲ್ಲದೇ ಇರುವುದರಿಂದ ಭಾಗಶಃ ಅಂತಿಮ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದಿರುತ್ತಾರೆ.

2-

Scanned with OKEN Scanner

ನೇಮಕಾತಿಆದೇಶದಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳಿಗೆ ಒಳಪಟ್ಟು ನಿಮ್ಮನ್ನು ಸ್ಪೆಷಲ್‌ರಿಸರ್ವ್ ಪೊಲೀಸ್‌ಕಾನ್ಸ್‌ಟೇಬಲ್ ಹುದ್ದೆಗೆ ವೇತನ ಶ್ರೇಣಿ ರೂ.23500–550–24600–27000–650–29600–750–32600–850–36000–950–39800–1100–46400–1250–47650 ಹಾಗೂ ಸದರಿ ವೇತನಕ್ಕೆ ಲಭ್ಯವಾಗುವ ಇತರೆ ಭತ್ಯೆಗಳನ್ನೊಳಗೊಂಡಂತೆ ಕನಿಷ್ಟ ವೇತನಕ್ಕೆ ನಿಗಧಿಪಡಿಸಿ ಈ ಕೆಳಕಂಡ ನಿಬಂಧನೆಗಳನುಸಾರ ನೇಮಕಾತಿ ಮಾಡಿಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿನಾಂಕ: 31-03-2006ರಂತೆ ರಾಷ್ಟ್ರೀಯ ಅಂಶದಾಯಿ ಪಿಂಚಣಿ ಸೌಲಭ್ಯಅನ್ವಯವಾಗುವುದು.

| | | | | | | |
|---|---|---|---|---|---|---|
| 1. | APPL.NO 2035032 ROLL NO 3404096 | NAME: MOHAN KUMARA C AADHAR NO: 464088696677 |  | S/O CHANDRA NAIK, NAYAKANAHTTI ROAD, SUDHAKAR NAGARA, NEAR PRIMARY SCHOOL, CHALLAKERE, CHITRADURGA, MOB. 7337737174 | sc_oth | SC |

ಷರತ್ತುಗಳು:–

1. ನೇಮಕವಾದ ಅಭ್ಯರ್ಥಿಯು ಈ ಆದೇಶ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಸ್ವಂತ ಖರ್ಚಿನಲ್ಲಿ ಕಮಾಂಡೆಂಟ್, 8ನೇ ಪಡೆ, ಕೆಎಸ್‌ಆರ್‌ಪಿ, ಮಾಚೇನಹಳ್ಳಿ, ಶಿವಮೊಗ್ಗ ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು. ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಇಚ್ಛೆ ಇಲ್ಲದಿದ್ದಲ್ಲಿ ಆರ್.ಪಿ.ಸಿ ಹುದ್ದೆಯ ನೇಮಕಾತಿರದ್ದುಪಡಿಸಲುಕೋರಿ ಲಿಖಿತ ಮನವಿಯನ್ನು ಸಲ್ಲಿಸುವುದು. ನಿಗದಿತ ದಿನಾಂಕದೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಯಾವುದೆ ಮುನ್ಸೂಚನೆಯನ್ನು ನೀಡದೆ ನಿಮ್ಮ ನೇಮಕಾತಿ ಆದೇಶವನ್ನು ರದ್ದುಪಡಿಸಲಾಗುವುದು.
2. ಸರ್ಕಾರದ ಆದೇಶದ ಪ್ರಕಾರ ಅಭ್ಯರ್ಥಿಯು ಕರ್ತವ್ಯಕ್ಕೆ ವರಧಿ ಮಾಡುವ ಸಮಯದಲ್ಲಿ ಕೆ.ಎಸ್.ಆರ್.ಪಿ., ಹುದ್ದೆಯಲ್ಲಿ ಕನಿಷ್ಠ 5 ವರ್ಷಗಳ ಸೇವೆಯನ್ನು ಸಲ್ಲಿಸುವುದಾಗಿ ರೂ. 500/– ಗಳ ಛಾಪಾ ಕಾಗದದಲ್ಲಿ ಮೇಲೆ ರೂ. 1,00,000/– (ರೂಪಾಯಿಒಂದು ಲಕ್ಷಗಳು ಮಾತ್ರ)ಗಳ ಮುಚ್ಚಳಿಕೆ ಪ್ರಮಾಣ ಪತ್ರ(Indemnity Bond) ಕಡ್ಡಾಯವಾಗಿ ಆದೇಶದೊಂದಿಗೆ ನೀಡಿರುವ ನಮೂನೆಯಲ್ಲಿ ಸಲ್ಲಿಸಬೇಕು.
3. ನಿಮ್ಮ ನಡತೆ/ಚಾರಿತ್ರ್ಯದ ಬಗ್ಗೆ ನಿಮ್ಮ ವಾಸ ಸ್ಥಳದ ವ್ಯಾಪ್ತಿಯ ಹೊರತುಪಡಿಸಿ, ವಿದ್ಯಾಭ್ಯಾಸ ಮಾಡಿದ ಶಾಲಾ/ಕಾಲೇಜು/ವಿಶ್ವವಿದ್ಯಾಲಯ ಹೊರತುಪಡಿಸಿ, ಇಬ್ಬರು ಜವಾಬ್ದಾರಿಯುತ ಗಣ್ಯವ್ಯಕ್ತಿಗಳಿಂದ ಇತ್ತೀಚಿನ 6 ತಿಂಗಳ ಒಳಗೆ ಪಡೆದಿರುವ ನಡತೆ/ಚಾರಿತ್ರ್ಯದ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು ಹಾಗೂ ಮೂರು ಪಾಸ್‌ಪೋರ್ಟ್ ಅಳತೆ ಭಾವಚಿತ್ರವನ್ನು ಈ ಕಛೇರಿಗೆ ನೀಡತಕ್ಕದ್ದು.
4. ಅಭ್ಯರ್ಥಿಗಳು ಕೆಲಸಕ್ಕೆ ಹಾಜರಾದ ದಿನಾಂಕದಿಂದ2 1/2ವರ್ಷಗಳಅವಧಿಗೆ ಪರಿವೀಕ್ಷಣಾ (ಪ್ರೊಬೇಷನರಿ) ಅವಧಿಯಲ್ಲಿದ್ದು, ಅವರು ಪ್ರೊಬೇಷನರಿ ಅವಧಿಯಲ್ಲಿ ಕನ್ನಡ ಭಾಷಾ ಪರೀಕ್ಷೆ(ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮಅಥವಾ ದ್ವಿತೀಯ ಭಾಷೆಯಾಗಿ ತೆಗೆದುಕೊಳ್ಳದಿದ್ದಲ್ಲಿ.) ಯನ್ನು ಪಾಸು ಮಾಡತಕ್ಕದ್ದು. ಪ್ರೊಬೇಷನರಿ ಅವಧಿಯಲ್ಲಿ ನಿಗಧಿತ ಇಲಾಖಾ ಪರೀಕ್ಷೆ ಪಾಸು ಮಾಡದಿದ್ದಲ್ಲಿ ಅಥವಾ ಕೆಲಸಕಾರ್ಯಗಳು ತೃಪ್ತಿಕರವಾಗಿರದಿದ್ದಲ್ಲಿ ಅವರನ್ನು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು–1977ರ ನಿಯಮ–6(1)ರ ಪ್ರಕಾರ ಸೇವೆಯಿಂದ ತೆಗೆದು ಹಾಕಲಾಗುವುದು.
5. ಈ ನೇಮಕಾತಿಯು ಸಂಪೂರ್ಣ ತಾತ್ಕಾಲಿಕವಾಗಿದ್ದು ಸರ್ಕಾರವು ಇಚ್ಚಿಸಿದಲ್ಲಿ ಅಥವಾ ಹುದ್ದೆಗಳು ರದ್ದಾದಲ್ಲಿ ಅಥವಾ ಸಿಂಧುತ್ವದ ನೈಜತೆ ಸಾಭೀತಾಗದಿದ್ದಲ್ಲಿ ಅಥವಾ ಸುಳ್ಳು ಮಾಹಿತಿ ನೀಡಿ, ಉದ್ಯೋಗ ಪಡೆದಿರುವುದು ಕಂಡು ಬಂದಲ್ಲಿ ಅವರನ್ನು ಯಾವುದೇ ಸಮಯದಲ್ಲಿ ಮುನ್ಸೂಚನೆ ನೀಡದೆ ಸೇವೆಯಿಂದ ತೆಗೆದುಹಾಕಲಾಗುವುದು.
6. ಅಭ್ಯರ್ಥಿಯು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತ ಸಂವಿಧಾನದರೀತ್ಯಾ "ನಿಷ್ಠೆಯ ಪ್ರಮಾಣ ವಚನ" ಹಾಗೂ "ರಹಸ್ಯ ಪಾಲನೆಯ ಪ್ರಮಾಣ ವಚನ" ಸ್ವೀಕರಿಸತಕ್ಕದ್ದು.
7. ಅಭ್ಯರ್ಥಿಗಳು ಸರ್ಕಾರದ ಸಕ್ಷಮಜಿಲ್ಲಾ ವೈದ್ಯಕೀಯ ಪ್ರಾಧಿಕಾರದಿಂದ ಪಡೆದಿರುವ ದೈಹಿಕ ಅರ್ಹತಾ ಪ್ರಮಾಣ ಪತ್ರವನ್ನು (ಎರಡು ಗುರುತಿನ ಚಿಹ್ನೆ ಇರುವ) ಕರ್ತವ್ಯಕ್ಕೆ ಹಾಜರಾದ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.
8. ಅಭ್ಯರ್ಥಿಯು ಇಲಾಖೆಯಿಂದ ಕಾಲಕಾಲಕ್ಕೆ ನಿಗಧಿಪಡಿಸಿದ ಹಾಗೂ ನಿಗಧಿಪಡಿಸಲಾಗುವ ವಿವಿಧ ಪರೀಕ್ಷೆ/ತರಬೇತಿಗಳನ್ನು ಯಶಸ್ವಿಯಾಗಿ ಮುಗಿಸತಕ್ಕದ್ದು.

3–

Scanned with OKEN Scanner

9. ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಹಾಗೂ ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು ಹಾಗೂ ಈ ಪಡೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಮೊದಲು ಮುಂಚಿನ ಸೇವೆಯಿಂದ ಬಿಡುಗಡೆ ಆದೇಶ ಪಡೆದಿರಬೇಕು.
10. ಅಭ್ಯರ್ಥಿಗಳು ತಮ್ಮ ಕುಟುಂಬದ ಒಟ್ಟು ಚರ-ಸ್ಥಿರ ಆಸ್ತಿಯ ವಿವರದ ಬಗ್ಗೆ ವರದಿಯನ್ನು ನಿಗದಿಪಡಿಸಲಾಗಿರುವ ನಮೂನೆಯಲ್ಲಿ ಸಲ್ಲಿಸತಕ್ಕದ್ದು.
11. ಅಭ್ಯರ್ಥಿಗೆ ಕೆಲಸಕ್ಕೆ ಹಾಜರಾಗುವ ಸಂದರ್ಭದಲ್ಲಿ ಪ್ರಯಾಣ ಭತ್ಯೆ ಅಥವಾ ಇತರೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.
12. ಅಭ್ಯರ್ಥಿಯ ನೇಮಕಾತಿ ಮತ್ತು ಸೇವಾಷರತ್ತುಗಳು ಆಗಿಂದಾಗ್ಗೆ ಜಾರಿಗೆ ಬರುವ ಆದೇಶಗಳ ಅಧೀನಕ್ಕೆ ಮತ್ತು ಕೆಳಕಂಡ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ.
    1) ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ನೇಮಕಾತಿ ಮತ್ತು ಸೇವಾ ಷರತ್ತುಗಳು) (ತಿದ್ದುಪಡಿ)ನಿಯಮಗಳು 2020.
    2) 1963 ರ ಕರ್ನಾಟಕ ಪೊಲೀಸ್‌ಕಾಯ್ದೆ.
    3) 1965ರಮತ್ತುತಿದ್ದುಪಡಿ ನಿಯಮಗಳು 1989ರಕರ್ನಾಟಕರಾಜ್ಯ ಪೊಲೀಸ್(2ಸ್ತು ನಡಾವಳಿ) ನಿಯಮಾವಳಿಗಳು.
    4) ಕರ್ನಾಟಕಪೊಲೀಸ್ ಮ್ಯಾನ್ಯುಯಲ್ ಮತ್ತು ಕೆ.ಎಸ್.ಆರ್.ಪಿ. ಮ್ಯಾನ್ಯುಯಲ್.
    5) 1966ರಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು.
    6) 1977ರಕರ್ನಾಟಕ ನಾಗರೀಕ ಸೇವಾ ನಿಯಮ (ಪ್ರೊಬೇಷನ್) ಮತ್ತುಇತರೆ ನಿಯಮಗಳು.
    ಇಲಾಖೆ ನಿಗದಿಪಡಿಸಿದ ಬುನಾದಿ ತರಬೇತಿ.
    7) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು-1977.
    8) ಆಗಿಂದಾಗ್ಗೆ ಇಲಾಖೆಯಿಂದ ಹೊರಡಿಸುವ ಇತರೆ ನಿಯಮಗಳು.

ಅಭ್ಯರ್ಥಿಯು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಕೂಡಲೇ ಕರ್ನಾಟಕ ರಾಜ್ಯ ವಿಮಾ ಇಲಾಖೆಯಲ್ಲಿ ಕಡ್ಡಾಯ ವಿಮಾದಾರರಾಗದ ಹೊರತು (ಕನಿಷ್ಠ ಮಾಸಿಕ ವಂತಿಗೆರೂ. 2220/-), ಇ.ಜಿ.ಐ.ಎಸ್. ಮೊದಲ ಕಂತನ್ನು (ರೂ.240/) ಕಡ್ಡಾಯವಾಗಿ ಪಾವತಿ ಮಾಡಲು ಸೂಚಿಸಲಾಗಿದೆ. ವೇತನವನ್ನು ಬ್ಯಾಂಕ್ ಉಳಿತಾಯ ಖಾತೆಗೆ ಇ.ಸಿ.ಎಸ್. ಮೂಲಕ ಪಾವತಿಸಲಾಗುತ್ತಿದ್ದು, ಅಭ್ಯರ್ಥಿಯು ಹೊಂದಿರುವ ಬ್ಯಾಂಕ್‌ಖಾತೆಯ ಪಾಸ್‌ಬುಕ್ ಪ್ರತಿ, ಆಧಾರ್‌ಕಾರ್ಡ್ ಹಾಗೂ ಪಾನ್‌ಕಾರ್ಡ್ ಪ್ರತಿಗಳನ್ನು ಕಛೇರಿಗೆ ನೀಡಲು ಸೂಚಿಸಲಾಗಿದೆ.

14/07/22

(ಬಿ.ಡಿ. ಲೋಕೇಶ್)
ಅಧ್ಯಕ್ಷರು,
8ನೇ ಪಡೆ ಕೆ.ಎಸ್.ಆರ್.ಪಿ., ಸ್ಪೆ.ಆರ್.ಪಿಸಿ ನೇಮಕಾತಿ ಸಮಿತಿ
ಹಾಗೂ ಕಮಾಂಡೆಂಟ್,
8ನೇ ಪಡೆ, ಕೆ.ಎಸ್.ಆರ್.ಪಿ, ಶಿವಮೊಗ್ಗ.

ಗೆ,

ಮೇಲ್ಕಂಡ ಅಭ್ಯರ್ಥಿಗೆ (ನೊಂದಾಯಿತ ಅಂಚೆ ಮೂಲಕ)

Scanned with OKEN Scanner